ಕಡಿತಗೊಂಡ ವೈದ್ಯಕೀಯ ಸೀಟುಗಳು

1674 (2829); ಡಾ: ಸುಧಾಕರ್ ಕೆ.

ಅ) ರಾಜ್ಯದ ಹಳೆಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಡಿತ ಗೊಂಡಿರುವ ವೈದ್ಯಕೀಯ ಸೀಟುಗಳನ್ನು ಪಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದು;

ಆ) ಯಾವ ವರ್ಷದಿಂದ ಕಡಿತ ಮಾಡಲಾಗಿದೆ; ಯಾವ ಕಾರಣಕ್ಕೆ ಕಡಿತ ಮಾಡಲಾಗಿದೆ;

ಇ) ಕಾಲೇಜುಗಳಲ್ಲಿ ಕೆಲವು ದೋಷಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ಸರ್ಕರ ತೆಗೆದುಕೊಂಡಿರುವ ಕ್ರಮಗಳೇನು;

ಉ) ಭಾರತೀಯ ವೈದ್ಯಕೀಯ ಮಂಡಳಿ ಹಾಗೂ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮಾಹಿತಿ ನೀಡಲಾಗಿದೆಯೇ;

ಊ) ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟುಗಳು ಕಡಿತಗೊಳಿಸಲಾಗಿದೆ (ವಿವರ ಒದಗಿಸುವುದು);

ಋ) ಇಲಾಖೆಯ ವ್ಯಾಪ್ತಿಯಡಿ ಬರುವ ಕಾಲೇಜುಗಳಲ್ಲಿ ಸಿಬ್ಬಂದಿ, ಶಿಕ್ಷಣದ ಕೊರತೆ ಇದೆಯೇ; ಇದಕ್ಕಾಗಿ ಸರ್ಕಾರ ಪ್ರಸ್ತು ವರ್ಷ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು?

ಡಾ: ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಈಗಾಗಲೇ ಕ್ರಮ ಕೈಗೊಂಡಿದೆ.

ಆ) ಕಡಿಗೊಂಡಿರುವುದಿಲ್ಲ.

ಇ) ಹೌದು.

ಈ) ಕೂಡಲೇ ಸರಿಪಡಿಸಲು ಆಶ್ವಾಸನೆ ನೀಡಲಾಗಿದೆ.

ಊ) ಮಾಹಿತಿ ನೀಡಿದೆ.

ಋ) ಕಡಿತಗೊಂಡಿರುವುದಿಲ್ಲ.

ಌ) ಇಲಾಖೆಯ ವ್ಯಾಪ್ತಿಯಡಿ ಬರುವ ಕೆಲವೊಂದು ಕಾಲೇಜುಗಳಲ್ಲಿ ಸಿಬ್ಬಂದಿ ಕೊರತೆ ಇದ್ದು, ಸದರಿ ಹುದ್ದೆಗಳನ್ನು ವಾಕ್ ಇನ್ ಇಂಟರ್‌ವ್ಯೂ ಮೂಲಕ ತುಂಬಿಕೊಳ್ಳಲು ಈಗಾಲೇ ಅನುಮತಿ ನೀಡಲಾಗಿದೆ. ಇದಕ್ಕಾಗಿ ಪ್ರಸ್ತುತ ವರ್ಷ ಒಟ್ಟು ರೂ. 2050.00 ಲಕ್ಷಗಳನ್ನು ಆಯವ್ಯದಲ್ಲಿ ನಿಗದಿಪಡಿಸಲಾಗಿದೆ.

ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಆದಾಯ

1676 (979); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಎಷ್ಟು ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ (ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕಂಪನಿಗಳು ತಮ್ಮ ಸಾಫ್ಟ್‌ವೇರ್ ಸೇವೆಗಳನ್ನು ಎಷ್ಟು ರಫ್ತು ಮಾಡಿದೆ; ಈ ಕಂಪನಿಗಳಲ್ಲಿ ಎಷ್ಟು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಇ) ರಾಜ್ಯದಲ್ಲಿ ಈ ಕಂಪನಿಗಳ ಉತ್ಪನ್ನ ಮತ್ತು ಸೇವೆಯಿಂದ ವಿದೇಶಿ ವಿನಿಮಯದಿಂದ ಎಷ್ಟು ಡಾಲರ್‌ಗಳು ಲಭ್ಯವಾಗುತ್ತಿವೆ ಹಾಗೂ ರಾಜ್ಯದ ಬೊಕ್ಕಸಕ್ಕೆ ಎಷ್ಟು ತೆರಿಗೆ ಬರುತ್ತಿದೆ; ಈ ಕಂಪನಿಗಳನ್ನು ಪ್ರೋತ್ಸಾಹಿಸಲು ಸರ್ಕಾರ ಏನು ಕಾರ್ಯಕ್ರಮ ರೂಪಿಸಿದೆ?